ANDOLANA

Date: Oct 10, 2015 Page: 11

Edition: Mysore Language: Kannada

# ಭಾರತ ಮೆಚ್ಚಿದ ಚೀನಾ ವಿದ್ಯಾರ್ಥಿಗಳು

## ಎಸ್‌ಡಿಎಂ ಕಾಲೇಜಿನಲ್ಲಿನ ಸಂವಾದದಲ್ಲಿ ಭಾರತ ಕೊಂಡಾಡಿದರು

ಮೈಸೂರು,ಅ.೯–'ಭಾರತ ನಿಜಕ್ಕೂ ಅದ್ಭುತ'.. ಹೀಗೆ ಉದ್ಘರಿಸಿದವರು ಚೀನಾದ ಶಾಂಘೈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು.

'ವಿದೇಶದಲ್ಲಿ ಶಿಕ್ಷಣ ಕಾರ್ಯಕ್ರಮದ' ಅಂಗವಾಗಿ ಒಂದು ವಾರಗಳ ಕಾಲ ಶೈಕ್ಷಣಿಕ ಅಭ್ಯಾಸಕ್ಕಾಗಿ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಡೆವಲಪ್‌ಮೆಂಟ್ ಕಾಲೇಜಿಗೆ ಬಂದ ವಿದ್ಯಾರ್ಥಿಗಳ ಅನುಭವದ ಮಾತು.

ಶಾಂಘೈ ವಿವಿ ಉಪ ಕಾರ್ಯಕ್ರಮ ಅಧಿಕಾರಿ ಜೆಟಿಂಗ್ ಝಿಂಗ್ ಹಾಗೂ ವಿದ್ಯಾರ್ಥಿಗಳೊಂದಿಗೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮೇಲಿನಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿಗೆ ಬರುವ ಮೊದಲು ನಮಗೆ ನಕಾರಾತ್ಮಕ ಅಭಿಪ್ರಾಯಗಳೇ ಸಿಕ್ಕಿದ್ದವು. ಆದರೆ ಇಲ್ಲಿಗೆ ಬಂದು ಇಲ್ಲಿನ ಜನರೊಂದಿಗೆ ಬೆರೆತಾಗ ನಿಜಕ್ಕೂ ಸಂತೋಷವಾಯಿತು. ಇಲ್ಲಿ ಭಯವಿಲ್ಲದೆ ಧೈರ್ಯವಾಗಿ ಓಡಾಡಿದ್ದೇವೆ. ಎಲ್ಲರೂ ಸ್ನೇಹ ಜೀವಿಗಳು. ಅನೇಕರು ನಮಗೆ ಸಹಾಯ ಹಸ್ತ ನೀಡಿದ್ದಾರೆ. ಇಲ್ಲಿನ ವಾತಾವರಣ ಆಹ್ಲಾದಕರವಾಗಿದೆ. ಭಾರತಕ್ಕೆ ಬಂದಿದ್ದು ತುಂಬಾ ಖುಷಿಯಾಯಿತು. ಭಾರತ ನಿಜಕ್ಕೂ ಅದ್ಭುತವಾದ ದೇಶ. ಏಷ್ಯಾ ಖಂಡದಲ್ಲಿ ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶ ಎಂದು ಅಭಿಪ್ರಾಯ ಪಟ್ಟರು.

ಚೀನಾದ ಶಾಂಘೈ ವಿವಿಯಲ್ಲಿ ಜಿಎಲ್ ಎಂಬಿಎ ಪದವಿ ಶಿಕ್ಷಣ ಪಡೆಯುತ್ತಿರುವ ೧೭ ಮಂದಿ ವಿದ್ಯಾರ್ಥಿಗಳು ಹಾಗೂ ೩ ಮಂದಿ ಸಿಬ್ಬಂದಿಗಳು ಬಂದಿದ್ದು, ಶಿಕ್ಷಣದ ಜೊತೆಗೆ ನಗರದ ಇನ್ಫೋಸಿಸ್, ಟಿವಿಎಸ್, ಸ್ಕ್ಯಾನ್ ಡ್ರೈ ಸಂಸ್ಥೆಗಳಿಗೆ ಭೇಟಿ ನೀಡಿದ್ದಾರೆ. ಇದಲ್ಲದೆ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರೊಂದಿಗೆ ಸಂವಾದ ಮಾಡಿದ್ದಾರೆ. ನಗರದ ಕೆಲವು ಪ್ರವಾಸಿ ಕೇಂದ್ರಗಳಿಗೆ ಭೇಟಿ ನೀಡಿ ಸಾರ್ವಜನಿಕರೊಂದಿಗೂ ಸಂವಾದ ನಡೆಸಿದ್ದಾರೆ.



ಮೈಸೂರಿನ ಎಸ್‌ಡಿಎಂಐಎಂಡಿ ಕಾಲೇಜಿಗೆ ಭೇಟಿ ನೀಡಿರುವ ಶಾಂಘೈ ವಿವಿ ವಿದ್ಯಾರ್ಥಿಗಳಾದ ಟೀನಾ ಲೀ, ಬಿನ್ನಿ ವೀ, ಫೀ ಗವೀನ್ ಲಿಯೋ, ಐಲೀನ್ ವ್ಯಾಂಗ್ ಹಾಗೂ ಉಪ ಕಾರ್ಯಕ್ರಮ ಅಧಿಕಾರಿ ಜೆಟಿಂಗ್ ಝಿಂಗ್ ಶುಕ್ರವಾರ ನಡೆದ ಸಂವಾದದಲ್ಲಿ ಭಾಗವಹಿಸಿದ್ದರು.

**ಪ್ರಧಾನಿ ಭೇಟಿಯಿಂದ ಅಭಿವೃದ್ಧಿ ನಿರೀಕ್ಷೆ:** ಇತ್ತೀಚೆಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಚೀನಾಗೆ ಭೇಟಿ ನೀಡಿದ ಹಿನ್ನೆಲೆಯಲ್ಲಿ ಎರಡೂ ರಾಷ್ಟ್ರಗಳ ಸಹಯೋಗದಲ್ಲಿ ಅಭಿವೃದ್ಧಿ ಸಾಧ್ಯವಿದೆ ಎಂದು ಅಭಿಪ್ರಾಯ ಪಟ್ಟ ವಿದ್ಯಾರ್ಥಿಗಳು ಇದರಿಂದ ಶಿಕ್ಷಣ ಹಾಗೂ ವ್ಯಾಪಾರದಲ್ಲಿ ಬೆಳವಣಿಗೆ ಸಾಧ್ಯ. ಎರಡು ದೇಶಗಳು ಸ್ಪರ್ಧೆಗೆ ಇಳಿಯುವ ಬದಲು ಒಪ್ಪಂದದಿಂದ ಕೆಲಸ ಮಾಡಬೇಕಾಗಿದೆ ಎಂದರು.

ಸಂವಾದದಲ್ಲಿ ಟೀನಾ ಲೀ, ಬಿನ್ನಿ ವೀ, ಫೀ ಗವೀನ್ ಲಿಯೋ, ಐಲೀನ್ ವ್ಯಾಂಗ್ ಭಾಗವಹಿಸಿದ್ದರು. ಎಸ್‌ಡಿಎಂಐಎಂಡಿನ ಪ್ರೊ.ಮಾಲತಿ ಶ್ರೀರಾಮ್, ಗ್ರಂಥಪಾಲಕ ಡಾ.ಎಂ.ಸುನೀಲ್ ಪಾಲ್ಗೊಂಡಿದ್ದರು.

### ಸ್ವದೇಶಿ ವಸ್ತುಗಳ ತಯಾರಿ ಏಕಿಲ್ಲ?

ವಿದ್ಯಾರ್ಥಿಗಳು ಇಲ್ಲಿನ ಮಾಲ್‌ಗೆ ಭೇಟಿ ನೀಡಿದ್ದು, ಅಲ್ಲಿ ಬಹುತೇಕ ವಿದೇಶಿ ವಸ್ತುಗಳು ಹಾಗೂ ವಸ್ತ್ರಗಳೇ ಇರುವುದನ್ನು ನೋಡಿ ಭಾರತದಲ್ಲಿ ಹೆಚ್ಚು ಜನಸಂಖ್ಯೆ ಹಾಗೂ ವಿದ್ಯಾವಂತರಿದ್ದೂ ಕೂಡ ವಿದೇಶಿ ವಸ್ತುಗಳೇ ಹೆಚ್ಚಾಗಿವೆ. ಭಾರತದ ಸಾಂಪ್ರದಾಯಿಕ ಉಡುಗೆ ಅದ್ಭುತವಾಗಿದ್ದು, ಅದನ್ನೇ ವಿನ್ಯಾಸಗೊಳಿಸಿದ್ದಲ್ಲಿ ಹೆಚ್ಚು ಆಕರ್ಷಕವಾಗಿರುತ್ತದೆ. ವಸ್ತುಗಳ ತಯಾರಿಕೆಯಲ್ಲೂ ಮೇಡ್ ಇನ್ ಇಂಡಿಯಾ ವಸ್ತುಗಳೇ ಕಡಿಮೆ ಎಂದರು.

Student exchange program-Shanghai University students

# In the NEWS

Student exchange program-Shanghai University students